# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು</u>

**ಸಿ.ಸಿ ನಂ.313-2021** **ಪಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಡಿ.ಪಿ.ಪ್ರಕಾಶ್<br>ದೇವಿರಮ್ಮಹಳ್ಳಿ, ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 10-03-2023. |

**<u>ಪಾಟೀ ಸವಾಲುಃ ಶ್ರೀ ಈ.ಎಂ.ಕೆ ವಕೀಲರಿಂದಃ</u>**

ನಾನು ಸುಮಾರು 5-6 ವರ್ಷಗಳಿಂದ ದೇವಿರಮ್ಮಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನಾನು ಮೂಲತಃ ಹೆಚ್.ಡಿ.ಕೋಟೆ ತಾಲ್ಲೂಕು ದಡದಹಳ್ಳಿ ವಾಸಿ. ನಾನು ವ್ಯವಸಾಯಗಾರ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ನಾನು ವ್ಯಾಪಾರಗಾರ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವ್ಯಾಪಾರಗಾರ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿ ಬೇರೆ ಬೇರೆ ಗ್ರಾಮದವರು ಹಾಗೂ ಬೇರೆ ಬೇರೆ ಜನಾಂಗದವರು ಎಂದರೆ ಸರಿ. ನಾನು ನಂಜನಗೂಡಿಗೆ ಬರುವ ಪೂರ್ವದಿಂದಲೂ ಆರೋಪಿ ನನಗೆ ಪರಿಚಿತರು. ಆರೋಪಿ ನನಗೆ ಸುಮಾರು 7-8 ವರ್ಷಗಳಿಂದ ಪರಿಚಿತರಾಗಿರುತ್ತಾರೆ.

2. ಆರೋಪಿ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದು, ಅದನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೇನೆ. ಆರೋಪಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ನನಗೆ ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಸುಮಾರು 10 ಎಕರೆ ಜಮೀನು ಇರುತ್ತದೆ. ನಾನು ನಂಜನಗೂಡಿಗೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಗೆ ಏನು ಆಸ್ತಿ ಇದೆ ಎಂದು ನಿಮಗೆ ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಗೆ 2 ಅಂತಸ್ಥಿನ ಮನೆ ಇದ್ದು ಜಮೀನು ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ನನಗೆ ಅರಿವು ಇರುವುದಿಲ್ಲ. ನಾನು ರಿಯಲ್ ಎಸ್ಟೇಟ್ ವ್ಯವಹಾರನ್ನು

ಮಾಡುತ್ತಿದ್ದು, ಖಾಲಿ ನಿವೇಶನಗಳನ್ನು ಕೊಂಡುಕೊಳ್ಳುವುದು ಮತ್ತು ಅವುಗಳನ್ನು ಮಾರಾಟ ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ರೂ.20,000/-ಗಿಂತ ಹೆಚ್ಚಿನ ಹಣವನ್ನು ಸಾಲವಾಗಿ ಕೊಟ್ಟಾಗ ಏನು ಮಾಡಬೇಕು ಎಂಬ ವಿಚಾರ ತಮಗೆ ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ನನಗೆ ನಂಜನಗೂಡಿನ ಪತ್ರಬರಹಗಾರರಾದ ನಾಗರಾಜೇಅರಸ್ ಗೊತ್ತು. ಆರೋಪಿ ನಾಗರಾಜೇಅರಸ್ ರವರ ಬಳಿ ಜೀಪ್ ಡ್ರೈವರ್ ಹಾಗೂ ಸಹಾಯಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ಅವರೊಂದಿಗೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ ಮತ್ತು ನಾಗರಾಜೇಅರಸ್ ರವರು ಸೇರಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರು ಮಾಡಿದ ವೇಳೆ ನನ್ನ ವಕೀಲರ ಜೊತೆ ಇದ್ದು, ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ವಿಚಾರಣಾ ಪ್ರಮಾಣ ಪತ್ರವನ್ನು ತಯಾರಿಸಿದ ವೇಳೆ ನಾನು ನನ್ನ ವಕೀಲರಿಗೆ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತೇನೆ ಎಂದು ತಿಳಿಸಿದ್ದರಿಂದ ಅದನ್ನು ನನ್ನ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದು ತದನಂತರ ಆರೋಪಿ ನೀಡಿದ ಪ್ರತ್ಯುತ್ತರ ತಿಳುವಳಿಕೆಯನ್ನು ಗಮನಿಸಿ ಅದನ್ನು ತಿದ್ದುಪಡಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

4. ದಿ.05-11-2018 ರಂದು ಮೊದಲಭಾರಿಗೆ ಆರೋಪಿಗೆ ಹಣ ನೀಡುವ ಪೂರ್ವದಲ್ಲಿ ನಾನು ಆರೋಪಿಗೆ ನಾನು ಯಾವುದೇ ಸಾಲವನ್ನು ನೀಡಿರುವುದಿಲ್ಲ. ದಿ.05-11-2018 ರಂದು ಹಣ ನೀಡುವ ಮೊದಲಿಗೆ ನನಗೆ ಆರೋಪಿಯ ವ್ಯವಹಾರದ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ವ್ಯವಹಾರದ ಬಗ್ಗೆ ತಿಳಿದಿದ್ದು ಅವರ ಮೇಲಿನ ನಂಬಿಕೆಯಿಂದ ಆರೋಪಿಗೆ ಸಾಲವಾಗಿ ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ರಿಯಲ್ ಎಸ್ಟೇಟ್ ವ್ಯವಹಾರ ಎಂದರೆ ಆಸ್ತಿಯನ್ನು ಕೊಂಡುಕೊಳ್ಳುವುದು, ಮಾರುವುದು ಅಥವಾ ಬೇರೆಯವರ ಆಸ್ತಿಯನ್ನು ಮತ್ತೊಬ್ಬರಿಗೆ ಮಾರಾಟ ಮಾಡಿಸುವುದು ಆಗಿರುತ್ತದೆ ಎಂದರೆ ಸರಿ. ಆರೋಪಿ ಆಸ್ತಿಯನ್ನು ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಕರಾರನ್ನು ಮಾಡಿಕೊಂಡಿರುವುದು ನೋಡಿದ್ದೀರಾ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಬಡ್ಡಿ ರಹಿತವಾಗಿ ಸಾಲ ನೀಡಿದಂತೆ ಬೇರೆಯವರಿಗೆ ಸಾಲ ನೀಡಿರುವುದಿಲ್ಲ. ನಾನು ಮೊದಲಭಾರಿಗೆ ಆರೋಪಿಗೆ ರೂ.5,00,000/- ಗಳನ್ನು ಸಾಲವಾಗಿ ನೀಡಿದಾಗ 6 ತಿಂಗಳ ಒಳಗಾಗಿ ಮರುಪಾವತಿ

ಮಾಡುವುದಾಗಿ ತಿಳಿಸಿದ್ದರು. 2 ನೇ ಭಾರಿ ಆರೋಪಿ ನನ್ನಿಂದ ಸಾಲಪಡೆದಾಗ ಈ ಹಿಂದೆ ಆರೋಪಿ ತಿಳಿಸಿದಂತೆ 6 ತಿಂಗಳ ಒಳಗಾಗಿ ಮೊದಲು ಪಡೆದಿದ್ದ ಹಣ ಹಾಗೂ ಈಗ ಪಡೆದ ಹಣವನ್ನು ಮರುಪಾವತಿ ಮಾಡುವುದಾಗಿ ತಿಳಿಸಿದ್ದರು. ದಿ.19-03-2019 ರಂದು ಕೊನೆಯಭಾರಿ ನಾನು ಆರೋಪಿಗೆ ಸಾಲವಾಗಿ ಹಣ ನೀಡಿದಾಗಲೂ ಮೊದಲಭಾರಿ ಆರೋಪಿ ಹೇಳಿದ 6 ತಿಂಗಳ ಒಳಗಾಗಿಯೇ ಹಣವನ್ನು ಪಾವತಿ ಮಾಡುವುದಾಗಿ ಒಪ್ಪಿದ್ದರು. ಆರೋಪಿಗೆ ನಾನು ಕೊನೆಯಭಾರಿ ಹಣವನ್ನು ನೀಡಿದ ನಂತರ ಆರೋಪಿ ನನಗೆ ರೂ.13,25,000/-ಗಳಿಗೆ ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ಬರೆದುಕೊಟ್ಟಿರುತ್ತಾರೆ. ಆನ್ ಡಿಮ್ಯಾಂಡ್ ಪ್ರನೋಟ್ ನಲ್ಲಿಯೂ ಸಹ ಕಾಲಮಿತಿಯನ್ನು ನಮೂದಿಸಲಾಗಿದೆಯೇ ಇಲ್ಲವೇ ಎಂದು ನಾನು ಗಮನಿಸಿರುವುದಿಲ್ಲ. ನಾನು ಆನ್ ಡಿಮ್ಯಾಂಡ್ ಪ್ರನೋಟ್ ನ ಆಧಾರದೆ ಮೇರೆಗೆ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ನ್ಯಾಯಾಲಯದಲ್ಲಿ ಹಣ ವಸೂಲಾತಿಗಾಗಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ಬಡ್ಡಿ ಸಮೇತ ಹಣ ಮರುಪಾವತಿ ಮಾಡುವಂತೆ ಸಲ್ಲಿಸಿರುತ್ತೇನೆ ಎಂದರೆ ಇರಬಹುದು. ವಾಸ್ತವವಾಗಿ ನನ್ನ ಮತ್ತು ಆರೋಪಿ ನಡುವೆ ನಡೆದ ಹಣಕಾಸಿನ ವ್ಯವಹಾರದಲ್ಲಿ ಬಡ್ಡಿ ನೀಡುವ ಬಗ್ಗೆ ಮಾತುಕತೆ ಆಗಿರಲಿಲ್ಲ ಸರಿ.

5. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಆದರೆ Income tax returns ಅನ್ನು ದಾಖಲು ಮಾಡುತ್ತೇನೆ. ನನ್ನ Income tax returns ನಲ್ಲಿ ಆರೋಪಿಗೆ ಸಾಲವಾಗಿ ನೀಡಿದ ಹಣ ರೂ.13,25,000/- ಗಳಿಗೆ ಸಂಬಂಧಿಸಿದಂತೆ ನಮೂದು ಮಾಡಿರುವುದಿಲ್ಲ. ಒಂದು ವೇಳೆ ನಾನು ಆರೋಪಿಗೆ ರೂ.13,25,000/- ಗಳನ್ನು ಸಾಲವಾಗಿ ನೀಡಿದ ಪಕ್ಷದಲ್ಲಿ ಅದನ್ನು ನನ್ನ Income tax returns ನಲ್ಲಿ ನಮೂದು ಮಾಡುತ್ತಿದ್ದೆ ಎಂದರೆ ನನಗೆ ಅದರ ಬಗ್ಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಆಡಿಟರ್ ಗೆ ನನ್ನ ಬ್ಯಾಂಕ್ ಪಾಸ್ ಪಸ್ತಕ ಮತ್ತು ಚರ ಮತ್ತು ಸ್ಥಿರ ಸ್ವತ್ತುಗಳ ಬಗ್ಗೆ ಮಾಹಿತಿ ನೀಡಿರುತ್ತೇನೆಯೇ ಇಲ್ಲವೆ ಎಂಬುದರ ಬಗ್ಗೆ ನನಗೆ ತಿಳಿವಳಿಕೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಈಗ್ಗೆ ಸುಮಾರು ಒಂದುವರೆ ವರ್ಷಗಳಿಂದ ನನ್ನ Income tax returns ಅನ್ನು ದಾಖಲು ಮಾಡುತ್ತಿರುತ್ತೇನೆ ಎಂದು ನುಡಿಯುತ್ತಾರೆ. Income tax returns ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಅದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು Income tax returns ಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನು ತಿಳಿದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ಸಹ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದು ನನ್ನ ಬಳಿ ಆರೋಪಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿಗೆ ತಿಂಗಳಿಗೆ ರೂ.6,000/– ಗಳನ್ನು ಸಂಬಳವಾಗಿ ನೀಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಚೆಕ್ಕುಗಳನ್ನು ಆರೋಪಿಗೆ ನೀಡಿದ ಆತನ ಕಡೆಯಿಂದಲೇ ಹಣವನ್ನು ತರಿಸುತ್ತಿದ್ದೆನು ಎಂದರೆ ಸರಿಯಲ್ಲ. ನಾನು ಆರೋಪಿಯಿಂದಲೇ ಹಣವನ್ನು ತರಿಸುತ್ತಿದ್ದ ಕಾರಣ ನಾನು ತರಿಸುತ್ತಿದ್ದ ಹಣದ ಭದ್ರತೆಗಾಗಿ ಆರೋಪಿಯಿಂದ ಖಾಲಿ ಚೆಕ್ಕುಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಂತರ ಆರೋಪಿ ನನ್ನ ಬಳಿ ಕೆಲಸ ಬಿಟ್ಟಿದ್ದರಿಂದ ನಾನು ದ್ವೇಷಸಾದಿಸುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ನೀಡಿದ ಚೆಕ್ಕುಗಳ ಪೈಕಿ ಒಂದು ಚೆಕ್ಕನ್ನು ಹೆಚ್.ಡಿ.ಕೋಟೆ ತಾಲ್ಲೂಕು, ಸರಗೂರು ಹೋಬಳಿ ಕೊತ್ತೆಗಾಲು ಗ್ರಾಮದ ದೊಡ್ಡರಾಜು.ಕೆ.ಎನ್ ರವರಿಗೆ ನೀಡಿ ಸದರಿ ಚೆಕ್ಕಿನಲ್ಲಿ ರೂ.5,00,000/– ಎಂದು ನಮೂದಿಸಿ ದಿ.25–01–2022 ರಲ್ಲಿ ಆರೋಪಿಗೆ ತಿಳುವಳಿಕೆ ನೀಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನೋಟಿಸ್ ಗೆ ಆರೋಪಿ ದೊಡ್ಡರಾಜು ಯಾರು ಎಂದು ತನಗೆ ಗೊತ್ತಿಲ್ಲ. ನಾನೇ ಅವರ ಮುಖೇನ ನೋಟಿಸ್ ನೀಡಿಸಿರುತ್ತೇನೆ ಎಂದು ಸೂಕ್ತ ಪ್ರತ್ಯೂತ್ತರವನ್ನು ನೀಡಿದ್ದರಿಂದ ಹೆದರಿ ಅವರು ಮುಂದಿನ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

7. ಆರೋಪಿ ನೀಡಿದ ಚೆಕ್ ಅಮಾನ್ಯಗೊಂಡ ನಂತರ ನಾನು ಸಿವಿಲ್ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ದಾವೆಯಲ್ಲಿ ಆರೋಪಿಯ ಪತ್ನಿಗೆ ಸೇರಿದ ಒಂದು ಮನೆಯನ್ನು ಸಹ ಜಪ್ತು ಮಾಡಿಸಿರುತ್ತೇನೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮನೆಯೂ ಆರೋಪಿ ಹಾಗೂ ಅವರ ಪತ್ನಿ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದು ನುಡಿಯುತ್ತಾರೆ. ಸಿವಿಲ್ ದಾವೆಯಲ್ಲಿ ಆರೋಪಿಯ ಪತ್ನಿಯನ್ನು ಪಕ್ಷಗಾರಳನ್ನಾಗಿ ಮಾಡಿರುವುದಿಲ್ಲ. ಆರೋಪಿಗೆ ಯಾವುದೇ ಮನೆ ಇರುವುದಿಲ್ಲ ಆರೋಪಿಯು ವಾಸವಿರುವ ಮನೆಯೂ ಆರೋಪಿ ಪತ್ನಿಗೆ ಅವರ ತವರುಮನೆಯಿಂದ ಕಟ್ಟಿಸಿಕೊಟ್ಟಿರುವುದ್ದಾಗಿದ್ದು ಇವರ ಹೆಸರಿನಲ್ಲಿ ಜಂಟಿ ಖಾತೆಯನ್ನು ಮಾತ್ರ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಮೊದಲಿಗೆ ಆರೋಪಿ ನನ್ನಿಂದ ಸಾಲ ಪಡೆದಾಗ ಪುನಃ ತನಗೆ ಹಣ ಬೇಕಾಗುತ್ತದೆ ಎಂದು ಹೇಳಿರಲಿಲ್ಲ. ಆರೋಪಿ ನಾಗರಾಜೇಅರಸ್ ಮತ್ತು ನನ್ನ ಬಳಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದುದ್ದರಿಂದ ಅವರಿಗೆ ಇಷ್ಟೊಂದು ದೊಡ್ಡಮೊತ್ತದ ಹಣವನ್ನು ಸಾಲವಾಗಿ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿ ನನ್ನ ಬಳಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಇಷ್ಟು

ಹಣವನ್ನು ನೀಡುವ ನಂಬಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಂಬಿಕೆ ಇತ್ತು ಎಂದು ನುಡಿಯುತ್ತಾರೆ.

8. ನನ್ನ ಖಾತೆಯ ಪೂರ್ಣ ಮಾಹಿತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲ. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿಗೆ ಹೈಸ್ಕೂಲ್ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ನನಗೆ ತಿಳಿಸಿರುತ್ತಾರೆ. ಆರೋಪಿ ನಿವೇ ಹಣ ತೆಗೆದುಕೊಳ್ಳುವಂತೆ ಬರೆದುಕೊಟ್ಟಿದ್ದಾರೋ ಅಥವಾ ಬೇರೆಯವರು ಹಣ ತೆಗೆದುಕೊಳ್ಳುವಂತೆ ಬರೆದುಕೊಟ್ಟಿರುತಾರೋ ಎಂಬ ಪ್ರಶ್ನೆಗೆ ಸಾಕ್ಷಿ ಚೆಕ್ ಅನ್ನು ಆರೋಪಿ ನನ್ನ ಹೆಸರಿಗೆ ಬರೆದುಕೊಟ್ಟಿದ್ದು ಬೇರೆಯವರು ಹಣ ಪಡೆಯಲು ಹೇಗೆ ಸಾಧ್ಯ ಎಂದು ನುಡಿಯುತ್ತಾರೆ. ಆರೋಪಿ ನಿಪಿ–1 ಚೆಕ್ ಅನ್ನು ನನ್ನ ಮುಂದೆ ಬರೆದಿರುವುದಿಲ್ಲ. ನಿಪಿ–1 ರ ಚೆಕ್ ಅನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿ ಮನೆಗೆ ಹೋದಾಗ ಅವರು ನನಗೆ ಚೆಕ್ ಅನ್ನು ನೀಡಿರುತ್ತಾರೆ. ನಿಪಿ–1 ರಲ್ಲಿ ಬರೆದಿರುವ ಒಕ್ಕಣೆ ಮತ್ತು ಸಹಿ ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಹಿ ಮತ್ತು ಒಕ್ಕಣೆ ಮಾಡುವಾಗ ಬರವಣಿಗೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ಸಹಿ ಮಾಡಿ ನೀಡಿದ ಖಾಲಿ ಚೆಕ್ ಅನ್ನು ನಾನೇ ಭರ್ತಿ ಮಾಡಿಕೊಂಡು ಈ ಪಿರ್ಯಾದನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿಯೇ ಭರ್ತಿ ಮಾಡಿ ನನಗೆ ನಿಪಿ–1 ರ ಚೆಕ್ ಅನ್ನು ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಕಾನೂನು ಬದ್ಧವಾಗಿ ಕೊಡಬೇಕಾದ ಹಣಕ್ಕೆ ಸಂಬಂಧಿಸಿದಂತೆ ಆರೋಪಿಗೆ ನನಗೆ ಚೆಕ್ ಅನ್ನು ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಭದ್ರತೆಗಾಗಿ ನೀಡಿದ ಚೆಕ್ ಅನ್ನು ದುರುಪಯೋಗಪಡಿಸಿಕೊಂಡು ಆರೋಪಿ ವಿರುದ್ಧ ಈ ಪಿರ್ಯಾದನ್ನು ದಾಖಲು ಮಾಡಿರುತ್ತೇನೆ. ನಾನು ನನ್ನ ಪಿರ್ಯಾದಿನಲ್ಲಿ ತಿಳಿಸಿದಂತೆ ಆರೋಪಿ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**